**ಸಿ.ಸಿ.ನಂ.543/2019**

ದಿನಾಂಕಃ30.01.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ1, ಸಿ.ಡಬ್ಲ್ಯೂಃ1

**ಮುಂದುವರಿದ ಪಾಟೀ ಸವಾಲುಃ ಶ್ರೀ ಸಿ.ಬಿ. ಆರೋಪಿತರ ಪರ ವಕೀಲರಿಂದಃ-**

ನಾನು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಒಂದು ಕೆ.ಜಿ. ಬೆಳ್ಳಿಯ ಪೂಜಾ ಸಾಮಾಗ್ರಿಗಳನ್ನು ನನ್ನ ಗಂಡನಿಗೆ ಯಾವ ಸಂದರ್ಭದಲ್ಲಿ ನೀಡಲಾಗಿದೆ ಎಂದು ನಿಖರವಾಗಿ ಹೇಳಿಲ್ಲ ಅಂದರೆ ಸರಿಯಲ್ಲ. ಹಿಂದೂ ಸಂಪ್ರದಾಯದಂತೆ ಮದುವೆ ಸಂದರ್ಭದಲ್ಲಿ ಹುಡುಗ ಹುಡುಗಿಗಿಗೆ ಹಾಗೂ ಹುಡುಗಿ ಹುಡುಗನಿಗೆ ಉಂಗುರ ತೊಡಿಸುವುದು ಸಂಪ್ರದಾಯ ಅಂದರೆ

ಸರಿ. ಅದೇ ರೀತಿ ನನ್ನ ಪೋಷಕರು ಹಾಗೂ 1 ನೇ ಆರೋಪಿತನ ಪೋಷಕರು ಉಂಗುರಗಳನ್ನು ಕೊಡಿಸಿದ್ದಾರೆ ಅಂದರೆ ಸರಿ. ನನ್ನ ತಂದೆಯ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಚನ್ನಾಗಿರಲಿಲ್ಲ ಅಂದರೆ ಸರಿ. ನನ್ನ ಅತ್ತೆ-ಮಾವ ರವರ ಆರ್ಥಿಕ ಪರಿಸ್ಥಿತಿ ಚನ್ನಾಗಿದೆ ಅಂದರೆ ಸರಿ. ಮದುವೆಯಾದ ನಂತರ 3 ದಿನಗಳ ಕಾಲ ನನ್ನ ಗಂಡನ ಮನೆಯಲ್ಲಿ ಉಳಿದುಕೊಂಡಿದ್ದೇನೆ ಎಂದು ನಿಖರವಾಗಿ ಪೋಲೀಸರ ಮುಂದೆ ನೀಡಿದ ಹೇಳಿಕೆಯನ್ನು ತಿಳಿಸಿಲ್ಲ ಅಂದರೆ ಸರಿಯಲ್ಲ.

ಪೋಲೀಸರಿಗೆ ನೀಡಿದ ದೂರನ್ನು ಪೋಲೀಸರು ನಾನು ಹೇಳಿದಂತೆ ಬೆರಳಚ್ಚು ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ. ದೂರು ನೀಡಿದ ಸಮಯದಲ್ಲಿ ಎಷ್ಟು ಸಹಿ ಮಾಡಿದ್ದೀರಾ? ಅಂದರೆ, ಸಾಕ್ಷಿ ನಾನು ನೀಡಿದ ದೂರಿಗೆ ಸಹಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದೂರನ್ನು ಬೆರಳಚ್ಚು ಮಾಡಿದ ನಂತರ ನಾನು ಓದಿ ನೋಡಿದ್ದೇನೆ, ಪೋಲೀಸರು ನನಗೆ ಓದಿ ಹೇಳಿಲ್ಲ. ನನ್ನ ತಂದೆಯ ಮನೆಯಲ್ಲಿ 10 ದಿವಸಗಳ ಉಳಿದುಕೊಂಡಿದ್ದೇನೆ ಎಂದು ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ನಿಖರವಾಗಿ ಹೇಳಿಲ್ಲ ಅಂದರೆ ಸರಿಯಲ್ಲ.

ಆರೋಪಿಗಳಿಗೆ ನೀಡಿದ ಒಡವೆಗಳನ್ನು ಯಾವ ಅಂಗಡಿಯಿಂದ ಖರೀದಿಸಲಾಗಿದೆ ಎಂದು ನಿಖರವಾಗಿ ಪೋಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ನಿಖರವಾಗಿ ತಿಳಿಸಿಲ್ಲ ಅಂದರೆ ಸರಿ. ಒಡವೆ ಖರೀದಿಸಿದ ಬಗ್ಗೆ ರಶೀದಿಗಳನ್ನು ಪೋಲೀಸರಿಗೆ ನೀಡಿಲ್ಲ ಅಂದರೆ ಸರಿ. ವರದಕ್ಷಿಣೆ ವಿಚಾರವನ್ನು ಮಾತುಕತೆ ಮಾಡಿ ಆರೋಪಿಗಳಿಗೆ ನೀಡಿದಾಗ ನಮ್ಮ ಸಂಬಂಧಿಕರು ಯಾರು ಯಾರು ಇದ್ದರು ಎಂದು ನಿಖರವಾಗಿ ತಿಳಿಸಿಲ್ಲ ಅಂದರೆ, ಸಾಕ್ಷಿ ಅವರ ಹೆಸರುಗಳನ್ನು ನಂತರದಲ್ಲಿ ತಿಳಿಸಿರುವುದಾಗಿ ನುಡಿಯುತ್ತಾರೆ. ಈ ಬಗ್ಗೆ ನಾನು ಹೇಳಿಕೆಯಲ್ಲಿ ನಮ್ಮ ಸಂಬಂಧಿಕರ ಹೆಸರುಗಳನ್ನು ತಿಳಿಸಿರುವುದಿಲ್ಲ ಅಂದರೆ ಸರಿ. ಆರೋಪಿಗಳಿಗೆ ನೀಡಿದ ಒಡವೆಗಳನ್ನು ಖರೀದಿಸಲು ಹಣವನ್ನು ಎಲ್ಲಿಂದ ತಂದಿರಿ ಎಂದು ಹೇಳಿಕೆಯಲ್ಲಿ ತಿಳಿಸಿಲ್ಲ ಅಂದರೆ, ಸಾಕ್ಷಿಯು ನನ್ನ ನೌಕರಿಯಲ್ಲಿದ್ದು, ಅಲ್ಲಿಂದ ಸಾಲ ಪಡೆದು ತಂದಿರುತ್ತಾರೆ, ಆ ಬಗ್ಗೆ ದಾಖಲೆಗಳಿದ್ದರೆ ಹಾಜರುಪಡಿಸುತ್ತೇನೆ. ನನ್ನ ತಂದೆಯ ಆರೋಗ್ಯ ಅಷ್ಟೇನೂ ಚನ್ನಾಗಿಲ್ಲ ಅಂದರೆ ಸರಿ. ಆರೋಪಿಗಳು ನನಗೆ ಮಾನಸಿಕ ಹಿಂಸೆ ನೀಡಿರುವ ಬಗ್ಗೆ ನಾನು ದೂರಿನಲ್ಲಿ ಮತ್ತು ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನನ್ನ ಮದುವೆ ಸಮಯದಲ್ಲಿ ನನ್ನ ಬಳಿ ಫೋನ್ ಇತ್ತು, ಅದರಲ್ಲಿ ಎರಡು ಸಿಮ್ ಗಳು ಇದ್ದವು, ಸಾಕ್ಷಿ ಮುಂದುವರಿದು ಆರೋಪಿಗಳು ಕಸಿದುಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಸಿಮ್ ಗಳ ಪೈಕಿ ಜಿಯೋ ಸಿಮ್ ನನ್ನ ಹೆಸರಿನಲ್ಲಿತ್ತು, ಏರಟೆಲ್ ಸಿಮ್ ನನ್ನ ಹೆಸರಿನಲ್ಲಿ ಇರಲಿಲ್ಲ. ಸದರಿ ಸಿಮ್ ಗಳನ್ನು ಬ್ಲಾಕ್ ಮಾಡಿಸಲು ನಿಮಗೆ ತೊಂದರೆ

ಇರಲಿಲ್ಲವಾ? ಅಂದರೆ, ಸಾಕ್ಷಿ ನನ್ನ ಗಮನಕ್ಕೆ ಬಾರದಂತೆ ಆರೋಪಿಗಳೇ ಬ್ಲಾಕ್ ಮಾಡಿಸಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಬಳಿ ಎರಡು ಸಿಮ್ ಗಳು ಬ್ಲಾಕ್ ಆಗಿರುವ ವಿಚಾರವನ್ನು ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ.

ಆರೋಪಿಗಳು ನನಗೆ ದೈಹಿಕ-ಮಾನಸಿಕ ಹಿಂಸೆ ನೀಡುತ್ತಿದ್ದ ಬಗ್ಗೆ ನಾನು ಯಾವುದೇ ಮಹಿಳಾ ಸಾಂತ್ವನ ಕೇಂದ್ರಕ್ಕೆ ದೂರನ್ನು ನೀಡಿರುವುದಿಲ್ಲ. ನಿಮ್ಮ ತಂದೆಯ ಮನೆಯಲ್ಲಿ ಉಳಿದುಕೊಂಡಿದ್ದಾಗ ದೂರು ಕೊಡಲು ತೊಂದರೆ ಇತ್ತಾ? ಅಂದರೆ, ಸಾಕ್ಷಿಯು ಆರೋಪಿಗಳು ಸರಿ ಹೋಗಬಹುದು ಎಂಬ ಕಾರಣಕ್ಕೆ ಆಗ ದೂರ ನೀಡಲಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರಿಗೆ ಆರೋಪಿಗಳು ಹಿಂಸೆ ಕೊಡುತ್ತಿದ್ದಾರೆ ಎಂದು ಹೇಳಿದಾಗ, ಅವರಿಗೂ ಸಹ ದೂರು ಕೊಡಲು ತೊಂದರೆ ಇರಲಿಲ್ಲವಾ? ಅಂದರೆ, ಸಾಕ್ಷಿಯು ಸರಿ ಹೋಗಬಹುದು ಎಂದು ಕಾದಿರುತ್ತೇವೆ ಎಂದು ನುಡಿಯುತ್ತಾರೆ. ಆರೋಪಿಗಳು ಯಾವ ಕಾರು ಬೇಕು ಎಂದು ಬೇಡಿಕೆ ಇಟ್ಟಿದ್ದರು ಎಂದು ದೂರಿನಲ್ಲಿ ತಿಳಿಸಿಲ್ಲ ಅಂದರೆ, ಸಾಕ್ಷಿಯು ಆರೋಪಿಗಳು ಇಂತಹ ಕಾರು ಎಂದು ಹೇಳಿಲ್ಲ, ಆದರೆ ಕಾರು ಬೇಕು ಎಂದು ಬೇಡಿಕೆ ಇಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡನ ಅಕ್ಕ-ಪಕ್ಕದ ಮನೆಯವರು ಮದುವೆಯಾದ ದಿನ ನನ್ನ ಗಂಡನ ಮನೆಗೆ ಬಂದಿದ್ದರು ಅಂದರೆ ಸರಿಯಲ್ಲ. ನನ್ನ ಗಂಡನ ಅಕ್ಕ-ಪಕ್ಕದ ಮನೆಯವರೊಂದಿಗೆ ಮಾತನಾಡುತ್ತಿದ್ದೆ ಮತ್ತು ಅವರೊಂದಿಗೆ ಚನ್ನಾಗಿದ್ದೆ ಅಂದರೆ, ಸಾಕ್ಷಿಯು ಆರೋಪಿತರುಗಳು ನನ್ನನ್ನು ಮನೆಯಿಂದ ಆಚೆಯೇ ಬಿಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡನ ಮನೆಯ ಅಕ್ಕ-ಪಕ್ಕದಲ್ಲಿ ವಾಸದ ಮನೆಗಳು ಇದ್ದು, ನನ್ನ ಗಂಡನ ಮನೆಯಲ್ಲಿ ಚಿಕ್ಕ ಶಬ್ದವಾದರೂ ಸಹ ಆ ಮನೆಯವರುಗಳಿಗೆ ಕೇಳಿಸುತ್ತಿತ್ತು ಅಂದರೆ, ಸಾಕ್ಷಿಯು ಒಂದು ಕಡೆ ಖಾಲಿ ಜಾಗ ಇದೆ, ಮತ್ತೊಂದು ಕಡೆಗೆ ಶೆಡ್ ತರಹದ ಮನೆ ಇದ್ದು, ಅವರಿಗೆ ಶಬ್ದ ಕೇಳಿಸುತ್ತದೆ ಎಂದು ನುಡಿಯುತ್ತಾರೆ.

ನನ್ನ ಗಂಡನ ಮನೆಯಲ್ಲಿ ಒಡವೆಗಳನ್ನು ಬಿಟ್ಟು ಬಂದಿದ್ದೇನೆ ಎಂದು ತೋರಿಸಲು ಬಿಲ್ಲುಗಳನ್ನು ಪೋಲೀಸರಿಗೆ ನೀಡಿಲ್ಲ, ಸಾಕ್ಷಿಯು ನಾನು ಬಿಲ್ಲುಗಳನ್ನು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಮದುವೆ ಕಾಲಕ್ಕೆನಿಮಗೆ ಉಡುಗೊರೆಯಾಗಿ ಏನು ಕೊಟ್ಟಿದ್ದಾರೆ ಅಂದರೆ, ಸಾಕ್ಷಿಯು ಆರೋಪಿತರುಗಳ ಬೇಡಿಕೆಯಂತೆ ಆಭರಣಗಳನ್ನು ಕೊಟ್ಟಿದ್ದಾರೆ, ಆದರೆ ಊಡುಗೊರೆಯಾಗಿ ಒಂದು ಜೊತೆ ಕಿವಿ ಓಲೆ ಹಾಗೂ ಕಾಲು ಚೈನು ನೀಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ಗಂಡನ ಸಹೋದರಿ ಅವರ ಗಂಡನೊಂದಿಗೆ ಉತ್ತಮ ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ ಅಂದರೆ ಸರಿ. ನನ್ನ ಗಂಡ ನನ್ನ ಮದುವೆಯಾಗುವವರೆಗೂ ಆರೋಪಿತರು ಅನ್ಯೋನ್ಯವಾಗಿ ಒಟ್ಟಿಗೆ ವಾಸವಿದ್ದರು ಅಂದರೆ, ಸಾಕ್ಷಿಯು ಅದನ್ನು ಅವರನ್ನೇ ಕೇಳಬೇಕು ಎಂದು ನುಡಿಯುತ್ತಾರೆ.

ಪಿ.ಡಬ್ಲ್ಯು:1, ಸಿ.ಡಬ್ಲ್ಯೂ:1

ದಿನಾಂಕ:26.04.2017 ರಂದು ನನ್ನ ಸಹೋದರ ನನ್ನನ್ನು ನನ್ನ ತಂದೆ ಮನೆಗೆ ಕರೆದುಕೊಂಡು ಬಂದಿದ್ದಾನೆ ಎಂದು ಪೋಲೀಸರಿಗೆ ನೀಡಿದ ಹೇಳಿಕೆಯಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ. ನಾನೇ ನನ್ನ ಸ್ವ ಇಚ್ಛೆಯಿಂದ ನನ್ನ ಗಂಡನ ಮನೆ ಬಿಟ್ಟು ತವರು ಮನೆಗೆ ಬಂದಿರುತ್ತೇನೆ ಅಂದರೆ ಸರಿಯಲ್ಲ. ನನ್ನ ತಂದೆಯ ಮನೆಯಲ್ಲಿ 10 ದಿವಸಗಳ ಕಾಲ ಇದ್ದ ಸಮಯದಲ್ಲಿ ಆರೋಪಿಗಳು ನನಗೆ ಕರೆ ಮಾಡಿ 150 ಗ್ರಾಂ ಚಿನ್ನದ ಆಭರಣಗಳನ್ನು ನನ್ನ ತಂದೆಯಿಂದ ಪಡೆದು ತರುವಂತೆ ಹೇಳಿದ ಬಗ್ಗೆ ದೂರಿನಲ್ಲಿ ಹಾಗೂ ಹೇಳಿಕೆಯಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ.

ದಿನಾಂಕ:22.12.2016 ರಂದು 1 ನೇ ಆರೋಪಿಯು ನನ್ನ ತಂದೆ ಮನೆಗೆ ಬಂದು ನನ್ನನ್ನು ಕರೆದುಕೊಂಡು ಹೋದರು ಎಂದು ದೂರಿನಲ್ಲಿ ಹಾಗೂ ಹೇಳಿಕೆಯಲ್ಲಿ ತಿಳಿಸಿಲ್ಲ ಅಂದರೆ ಸರಿಯಲ್ಲ. ಆರೋಪಿತರುಗಳೆಲ್ಲರೂ ನನಗೆ ತೊಂದರೆ ಕೊಡುತ್ತಿದ್ದಾರೆ ಎಂಬುದರ ಬಗ್ಗೆ ವಕೀಲರುಗಳ ಮುಖೇನ ಅವರುಗಳಿಗೆ ನೋಟೀಸನ್ನು ನೀಡಿರುವುದಿಲ್ಲ. 1 ನೇ ಆರೋಪಿ ನನ್ನ ಮೊಬೈಲನ್ನು ಯಾವ ದಿನಾಂಕ, ತಿಂಗಳು, ಇಸವಿಯಲ್ಲಿ ಕಿತ್ತುಕೊಂಡರು ಎಂದು, ನಾನು ಯಾವಾಗ ಗರ್ಭವತಿಯಾಗಿದ್ದೇನೆ ಎಂದು ನಿರ್ಧಿಷ್ಟವಾಗಿ ದೂರಿನಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಅಂದರೆ ಸರಿ. ರಾಜಿ ಪಂಚಾಯ್ತಿ ಮಾಡಿದಾಗ ಅನುಸರಿಸಿಕೊಂಡು ಹೋಗು ಎಂದು ಪಂಚಾಯ್ತಿದಾರರು ತಿಳಿಸಿದ್ದರು ಅಂದರೆ, ಸಾಕ್ಷಿಯು ಆರೋಪಿಗಳು ಮುಂದೆ ಆದರೂ ಸರಿ ಹೋಗಿ ಚನ್ನಾಗಿ ನೋಡಿಕೊಳ್ಳಬಹುದು, ಅನುಸರಿಸಿಕೊಂಡು ಹೋಗು ಎಂದು ಹೇಳಿದ್ದರು ಎಂದು ನುಡಿಯುತ್ತಾರೆ.

ಪೋಲೀಸರು ಮಹಜರ್ ಮಾಡಲು ಎಂದೂ ನಮ್ಮ ಮನೆಗೆ ಬಂದಿಲ್ಲ ಮತ್ತು ಮಹಜರ್ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ಮತ್ತು ನನ್ನ ತಂದೆ ಪೋಲೀಸರೊಂದಿಗೆ ಷರೀಕಾಗಿ ಆರೋಪಿತರುಗಳಿಗೆ ತೊಂದರೆ ಕೊಡಲು ಸುಳ್ಳು ಮಹಜರ್ ಸೃಷ್ಠಿಸಿದ್ದೇವೆ ಅಂದರೆ ಸರಿಯಲ್ಲ. ಪೋಲೀಸರು ನಮ್ಮ ಮದುವೆ ಆಮಂತ್ರಣ ಪತ್ರಿಕೆಯನ್ನು ಮತ್ತು ಮದುವೆಯ ಛಾಯಾಚಿತ್ರಗಳನ್ನು ಪಡೆದಿಲ್ಲ ಅಂದರೆ ಸರಿಯಲ್ಲ. ಆರೋಪಿತರು ನಮ್ಮ ಬಳಿ ಯಾವುದೇ ರೀತಿ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ ಮತ್ತು ನಾವು ಯಾವುದೇ ರೀತಿ ವರದಕ್ಷಿಣೆಯನ್ನು ಆರೋಪಿತರಿಗೆ ನೀಡಿಲ್ಲ ಅಂದರೆ ಸರಿಯಲ್ಲ.1 ನೇ ಆರೋಪಿ ನಾನು ಹೇಳುವಂತೆ ಯಾವುದೇ ಫೋನನ್ನು ಕಸಿದುಕೊಂಡಿಲ್ಲ, ಸಿಮ್ ಗಳನ್ನು ಬ್ಲಾಕ್ ಮಾಡಿಸಿಲ್ಲ ಹಾಗೂ ಆರೋಪಿತರೆಲ್ಲರೂ ಸೇರಿ ನನಗೆ ಯಾವುದೇ ರೀತಿ ದೈಹಿಕ-ಮಾನಸಿಕ ಹಿಂಸೆ ನೀಡಿಲ್ಲ ಅಂದರೆ ಸರಿಯಲ್ಲ. ನಾವು ಮದುವೆ ಸಮಯದಲ್ಲಿ ಯಾವುದೇ ಆಭರಣಗಳನ್ನು ಖರೀದಿ ಮಾಡದೇ ಇರುವ ಕಾರಣ ಪೋಲೀಸರಿಗೆ ಆಭರಣಗಳ ಬಿಲ್ಲುಗಳನ್ನು

ನೀಡಿಲ್ಲ ಅಂದರೆ ಸರಿಯಲ್ಲ. ಈ ಪ್ರಕರಣ ದಾಖಲಾದ ನಂತರವೂ ಸಹ ಆರೋಪಿತರುಗಳು ನನ್ನನ್ನು ಅವರ ಮನೆಗೆ ಬರುವಂತೆ ಬಂದು ಕರೆದಿದ್ದರು ಅಂದರೆ ಸರಿಯಲ್ಲ. ಫೋನ್ ಮೂಲಕ ಆರೋಪಿತರುಗಳು ನನ್ನ ತಂದೆಗೆ ಅವಾಚ್ಯವಾಗಿ ಬೈದು, ಕೊಲೆ ಬೆದರಿಕೆ ಹಾಕಿಲ್ಲ ಅಂದರೆ ಸರಿಯಲ್ಲ, ಯಾವ ದಿನಾಂಕದಂದು ಹಾಗೆ ಮಾಡಿದ್ದಾರೆ ಎಂದು ಈಗ ನನಗೆ ನೆನಪಿಲ್ಲ. ಆರೋಪಿತರುಗಳು ನನಗೂ ಹಾಗೂ ನನ್ನ ಕುಟುಂಬದವರಿಗಾಗಲೀ ಜೀವ ಬೆದರಿಕೆ ಒಡ್ಡಿಲ್ಲ ಮತ್ತು ಯಾವುದೇ ತೊಂದರೆ ನೀಡಿಲ್ಲ ಅಂದರೆ ಸರಿಯಲ್ಲ. ಆರೋಪಿತರು ನಮಗಿಂತ ಶ್ರೀಮಂತರಾಗಿರುವ ಕಾರಣ ಯಾವುದೇ ವರದಕ್ಷಿಣೆಯನ್ನಾಗಲೀ, ಕಾರನ್ನಾಗಲೀ ಮತ್ತು ಚಿನ್ನದ ಆಭರಣಗಳನ್ನಾಗಿಲೀ ಕೇಳಿಲ್ಲ ಅಂದರೆ ಸರಿಯಲ್ಲ.

ರಾಜಿ ಮಾತುಕತೆಯಾದ ದಿನಾಂಕಗಳನ್ನು ನನ್ನ ಸಾಕ್ಷ್ಯದಲ್ಲಿ ತಿಳಿಸಿಲ್ಲ ಅಂದರೆ ಸರಿ. 1 ನೇ ಆರೋಪಿಯನ್ನು 2 ಮತ್ತು 3 ನೇ ಆರೋಪಿತರಿಂದ ಬೇರೆ ಮಾಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರುಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿತರನ್ನು ನೋಡಿಕೊಳ್ಳಲು ಇಷ್ಟವಾಗದ ಕಾರಣ ಸುಳ್ಳು ಪ್ರಕರಣ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಗೆ ನಾನೇ ಮಾನಸಿಕ-ದೈಹಿಕ ಹಿಂಸೆ ನೀಡಿದ್ದೇನೆ ಅಂದರೆ ಸರಿಯಲ್ಲ. ಅಕ್ಕ-ಪಕ್ಕದ ಮನೆಯವರು ಆರೋಪಿತರುಗಳು ಸುಸಂಸ್ಕೃತರು, ಅವರಿಗೆ ಹಿಂಸೆ ಕೊಡಬೇಡ ಎಂದು ನನಗೆ ಬುದ್ಧಿವಾದ ಹೇಳಿದ್ದರು ಅಂದರೆ ಸರಿಯಲ್ಲ. ಆರೋಪಿತರು ಯಾವಾಗ ವರದಕ್ಷಿಣೆ ಬೇಡಿಕೆ ಇಟ್ಟಿದ್ದರು ಎಂದು ದೂರು ಮತ್ತು ಹೇಳಿಕೆಯಲ್ಲಿ ತಿಳಿಸಿದ್ದೇನೆ. ವರದಕ್ಷಿಣೆ ಬೇಡಿಕೆಇಟ್ಟ ದಿನ ದೂರು ಕೊಡಲು ತೊಂದರೆ ಇತ್ತಾ? ಅಂದರೆ, ಸಾಕ್ಷಿಯು ಸರಿ ಹೋಗಬಹುದು ಎಂದು ದೂರು ನೀಡಲಿಲ್ಲ ಎಂದು ನುಡಿಯುತ್ತಾರೆ. 1 ನೇ ಆರೋಪಿ ಮನೆಯಲ್ಲಿ ಇಲ್ಲದ ಸಮಯದಲ್ಲಿ 2 ಮತ್ತು 3 ನೇ ಆರೋಪಿತರಿಗೆ ಕೆಟ್ಟದಾಗಿ ಬೈದು, ಹಿಂಸೆ ನೀಡುತ್ತಿದ್ದೆ ಅಂದರೆ ಸರಿಯಲ್ಲ, ಆದರೂ ಸಹ 2 ಮತ್ತು 3 ನೇ ಆರೋಪಿತರು ನಾನು ಚಿಕ್ಕ ವಯಸ್ಸಿನವಳು, ಸರಿಹೋಗುತ್ತೇನೆ, ಎಂದು ಆ ವಿಚಾರವನ್ನು 1 ನೇ ಆರೋಪಿಗೆ ತಿಳಿಸಿರಲಿಲ್ಲ ಅಂದರೆ ಸರಿಯಲ್ಲ. ಆರೋಪಿಗಳು ದೈಹಿಕ ಹಲ್ಲೆ ಮಾಡಿದ ಬಗ್ಗೆ ನಾನು ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದಿಲ್ಲ.

ನಾನು ಮದುವೆಗೂ ಮುನ್ನ ಬೆಂಗಳೂರಿನಲ್ಲಿ ಕೆಲಸದಲ್ಲಿದ್ದೆ ಅಂದರೆ ಸರಿ. ನಾನು ಮದುವೆಗೂ ಮುನ್ನ 1 ನೇ ಆರೋಪಿಯೊಂದಿಗೆ ವೈನನ್ನು ಕುಡಿಯಬೇಕು ಎಂದು ಕೇಳಿಕೊಂಡಿದ್ದೆ ಅಂದರೆ ಸರಿಯಲ್ಲ, ಅದರಂತೆ ನಾನು ಮತ್ತು 1 ನೇ ಆರೋಪಿ ಹೋಟೆಲ್ ಲೀಲಾ ಪ್ಯಾಲೇಸ್ ಮುಂದೆ ಇರುವ ಹೋಟೆಲ್ ಮ್ಯಾಕ್ ನಲ್ಲಿ ವೈನ್ ಸೇವಿಸಿದ್ದು, ಅದು ಸಿಸಿ ಕ್ಯಾಮೇರಾದಲ್ಲಿ ರೆಕಾರ್ಡ್ ಆಗಿರುತ್ತದೆ ಅಂದರೆ ಸರಿಯಲ್ಲ.

**ಸಿ.ಸಿ.ನಂ.543/2019**

ಪಿ.ಡಬ್ಲ್ಯೂ:1, ಸಿ.ಡಬ್ಲ್ಯೂ:1

ನನ್ನ ಮತ್ತು 1ನೇ ಆರೋಪಿಯೊಂದಿಗೆ ನನ್ನ ಮದುವೆಯಾದ ನಂತರ ಎಷ್ಟನೇ ದಿನಕ್ಕೆ ಪ್ರಸ್ತವಾಗಿದೆ ಎಂದು ನನಗೆ ಈಗ ನೆನಪಿಲ್ಲ. ನಮ್ಮ ಮದುವೆಯಾದ ನಂತರ ಎರಡು ತಿಂಗಳ ನಂತರ ಪ್ರಸ್ತವಾಗಿರುತ್ತದೆ ಅಂದರೆ, ಸಾಕ್ಷಿಯು ಡಿಸೆಂಬರ್ 2016 ರಲ್ಲಿ ಪ್ರಸ್ತವಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಪ್ರಸ್ತವಾಗುವ ಮುಂಚೆ ನಾನು ಮತ್ತು 1ನೇ ಆರೋಪಿ ಅನ್ಯೋನ್ಯವಾಗಿದ್ದೆವು ಅಂದರೆ, ಸಾಕ್ಷಿಯು 4 ದಿನಗಳು ಮಾತ್ರ ಅನ್ಯೋನ್ಯವಾಗಿದ್ದೆವು, ಆನಂತರ ಆರೋಪಿಗಳು ವರದಕ್ಷಿಣೆ ಬೇಡಿಕೆ ಇಟ್ಟಿದ್ದರು ಎಂದು ನುಡಿಯುತ್ತಾರೆ. 1ನೇ ಆರೋಪಿ ವಿದ್ಯಾವಂತನಿದ್ದು, ಅತ್ತೆ-ಮಾವ ಇಳಿ ವಯಸ್ಸಿನವರಾಗಿದ್ದು, ಅವರನ್ನು ನೋಡಿಕೊಳ್ಳುವ ಜವಾಬ್ದಾರಿ ಇದ್ದರೂ ಸಹ ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರು ನನ್ನನ್ನು ಚನ್ನಾಗಿ ನೋಡಿಕೊಂಡಿದ್ದು, ಯಾವತ್ತೂ ಸಹ ಯಾವುದೇ ರೀತಿ ಕಿರುಕುಳ ನೀಡಿ ವರದಕ್ಷಿಣೆ ಬೇಡಿಕೆ ಇಟ್ಟಿಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
III ನೇ.ಹೆ.ದಿ.ನ್ಯಾ.&ಪ್ರಃದಃನ್ಯಾಃದಂ.,ರವರು, ಕಡೂರು.